# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 834(900) |
| ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| ಉತ್ತರಿಸಬೇಕಾದ ದಿನಾಂಕ | : | 19-08-2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರ್ಗಿ ನಗರದಲ್ಲಿ ಮನೆ-ಮನೆ ಕಸ ಸಂಗ್ರಹ ಸಮರ್ಪಕವಾಗಿ ನಡೆದ ಕಾರಣ ಬೀದಿ ಬದಿ ಹಾಗೂ ಖಾಲಿ ಇರುವ ನಿವೇಶನಗಳಲ್ಲಿ ಕಸ ಹಾಕುತ್ತಿದ್ದು ಇದರಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು; | ಕಲಬುರಗಿ ನಗರದಲ್ಲಿ ಮನೆ-ಮನೆ ಕಸ ಸಂಗ್ರಹಣೆ ಸಮರ್ಪಕವಾಗಿ ನಡೆಸಲು ಕಲಬುರಗಿ ಮಹಾನಗರ ಪಾಲಿಕೆಯ 55 ವಾರ್ಡ್‌ಗಳಿಗೆ ಅವುಗಳ ವಿಸ್ತೀರ್ಣದ ಅನುಸಾರ ಒಂದು ವಾರ್ಡಿಗೆ ಕನಿಷ್ಠ 4 ರಿಂದ ಗರಿಷ್ಠ 7 ರವರೆಗೆ ವಾಹನಗಳನ್ನು ನಿಯೋಜಿಸಲಾಗಿರುತ್ತದೆ.<br><br>ವಾಹನವು ಸಂಚರಿಸಬೇಕಾದ ರಸ್ತೆಗಳ ಕುರಿತು ಮೈಕ್ರೋಪ್ಲಾನ್ ತಯಾರಿಸಲಾಗಿದ್ದು, ಇದರಲ್ಲಿ ವಾಹನವು ಯಾವ-ಯಾವ ರಸ್ತೆಯ ಮೂಲಕ ಹಾದು ಹೋಗಬೇಕು ಯಾವ ಸಮಯಕ್ಕೆ ಯಾವ ಮನೆಯ ಕಸ ಸಂಗ್ರಹಣೆಗೆ ಹೋಗಬೇಕು ಎಂಬ ಮಾಹಿತಿಯನ್ನು ಆರೋಗ್ಯ ನಿರೀಕ್ಷಕರು ಹಾಗೂ ಮೇಲ್ವಿಚಾರಕರು ನೀಡುತ್ತಾರೆ.<br><br>ವಾಹನಗಳು ನಿಗಧಿತ ಸಮಯಕ್ಕೆ ಮನೆ-ಮನೆ ಕಸ ಸಂಗ್ರಹಣೆಗೆ ತೆರಳುವ ಕುರಿತು ಮೇಲ್ವಿಚಾರಕರು ಹಾಗೂ ಆರೋಗ್ಯ ನಿರೀಕ್ಷರು ಮೇಲ್ವಿಚಾರಣೆ ಮಾಡುತ್ತಾರೆ.<br><br>ಇದನ್ನು ಖಚಿತಪಡಿಸೊಕೊಳ್ಳಲು ಮನೆ-ಮನೆ ಕಸ ಸಂಗ್ರಹಣೆ ವಾಹನಗಳ ಕಾರ್ಯವ್ಯಾಪ್ತಿಯಲ್ಲಿ ಆಯ್ದ ಕನಿಷ್ಠ 10 ಮನೆಗಳಿಗೆ ಕಾರ್ಡ್‌ಗಳನ್ನು ನೀಡಿದ್ದು, ಅದರಲ್ಲಿ ವಾಹನವು ಪ್ರತಿನಿತ್ಯ ಮನೆಗಳಿಗೆ ತೆರಳಿದ ಕುರಿತು ದಾಖಲಿಸಲಾಗುತ್ತದೆ.<br><br>ಅಲ್ಲದೇ, ಪ್ರತಿ ವಾರ್ಡಗೆ ಒಂದು ಕಮ್ಯುನಿಟಿ ವಾಟ್ಸ್ ಅಪ್ ಗ್ರೂಪ್ ಮಾಡಿದ್ದು, ಇದರಲ್ಲಿ ಕಾರ್ಡ್‌ಗಳನ್ನು ಪಡೆದ ನಾಗರೀಕರು, Active citizen ಗಳನ್ನು ಸೇರಿಸಲಾಗಿದ್ದು, ಇದರಿಂದ ವಾರ್ಡ್‌ಗಳಲ್ಲಿ ತ್ಯಾಜ್ಯ ಸಂಗ್ರಹಣೆಗೆ ಸಂಬಂಧಿಸಿದ ಯಾವುದೇ ದೂರು ಇದ್ದಲ್ಲಿ ಪಾಲಿಕೆಯ ಗಮನಕ್ಕೆ ಬಂದ ತಕ್ಷಣ ಶೀಘ್ರವಾಗಿ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.<br><br>ಇದರಿಂದ ಮನೆ-ಮನೆ ಕಸ ಸಂಗ್ರಹಣೆ ಹಾಗೂ ಸಮಗ್ರ ಘನತ್ಯಾಜ್ಯ ವಿಲೇವಾರಿಯಲ್ಲಿ ಪ್ರಗತಿ ಸಾಧಿಸಲು ಸಹಾಯವಾಗುತ್ತಿದೆ.<br><br>ಮುಂದುವರೆದು, ಸದರಿ ಕ್ರಮಗಳನ್ನು ಹೊರತು ಪಡಿಸಿಯೂ ಸಹ ಖಾಲಿ ನಿವೇಶನಗಳಲ್ಲಿ ಕಸ ಹಾಕುತ್ತಿರುವುದು ಕಂಡು ಬಂದಲ್ಲಿ ಖಾಲಿ ನೀವೇಶನಗಳ ಮಾಲೀಕರಿಗೆ ನೀವೇಶನದ ಸುತ್ತ ಬೇಲಿ ಹಾಕಿ ಕೊಳ್ಳುವಂತೆ ನೋಟಿಸ್ ನೀಡಲಾಗುತ್ತಿದೆ ಹಾಗೂ ದಂಡ |

| | | |
|---|---|---|
| | | ವಿಧಿಸಲಾಗುತ್ತಿದೆ. ಮುಂದುವರೆದು, ಅಕ್ಕ ಪಕ್ಕದ ನಿವಾಸಿಗಳಿಗೆ ಖಾಲಿ ನಿವೇಶನಗಳಲ್ಲಿ ಕಸ ಹಾಕದಂತೆ ತ್ಯಾಜ್ಯವನ್ನು ಪಾಲಿಕೆಗೆ ನೀಡುವಂತೆ ವಿನಂತಿಸಲಾಗಿದೆ. |
| (ಆ) | ಕಲಬುರ್ಗಿ ಮಹಾನಗರ ಪಾಲಿಕೆಯಿಂದ ನಗರ ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವ ವಾಹನಗಳು ತುಕ್ಕು ಹಿಡಿದಿದ್ದು ಈ ವಾಹನಗಳಲ್ಲಿ ಕಸ ಸಾಗಣೆ ಮಾಡುವಾಗ ರಸ್ತೆಯಲ್ಲೆಲ್ಲ ಚೆಲ್ಲುತ್ತ ಸಾಗುವುದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುತ್ತಿದ್ದು ಪಾಲಿಕೆ ಬಳಿ ಕಸ ಸಂಗ್ರಹಿಸಿ ಸಾಗಾಟ ಮಾಡಲು ವ್ಯವಸ್ಥಿತ ವಾಹನಗಳಿಲ್ಲವೇ; | ಪ್ರಸ್ತುತ ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಒಟ್ಟು 200 ವಿವಿಧ ಮಾದರಿಯ ಮನೆ-ಮನೆ ಕಸ ಸಂಗ್ರಹಣೆ ವಾಹನಗಳಿದ್ದು, ಅದರಲ್ಲಿ 2014-15ನೇ ವರ್ಷದಲ್ಲಿ ಖರೀದಿಸಿದ 67 ಆಟೋ ಟಿಪ್ಪರ್ ಗಳು Scrap ಹಂತದಲ್ಲಿರುತ್ತವೆ.<br><br>ಇವುಗಳನ್ನು ಸರಿದೂಗಿಸಲು 2024-25ನೇ ಸಾಲಿನಲ್ಲಿ ಹೊಸದಾಗಿ 25 ಆಟೋ-ಟಿಪ್ಪರ್ ವಾಹನಗಳನ್ನು ಖರೀದಿಸಲಾಗಿರುತ್ತದೆ.<br><br>ಸ್ವಚ್ಛಭಾರತ ಮಿಷನ್ 1.0 ಅಡಿಯಲ್ಲಿ ಮನೆ ಮನೆ ಕಸ ಸಂಗ್ರಹಣೆಗಾಗಿ 33 ಹೊಸ ವಾಹನಗಳನ್ನು ಖರೀದಿಸಲು ಕ್ರಮ ವಹಿಸಲಾಗಿದೆ. |
| (ಇ) | ಮಹಾನಗರ ಪಾಲಿಕೆ ಕಸ ಸಂಗ್ರಹ ಮತ್ತು ಸಾಗಾಟಕ್ಕೆ ವಾಹನ ಕೊಳ್ಳಲು ಹಣಕಾಸಿನ ತೊಡಕುಗಳಿವೆಯೇ; ಪಾಲಿಕೆ ವಾರ್ಷಿಕ ಆಯವ್ಯಯ ಎಷ್ಟು; ಈಗಾಗಲೇ ವಾಹನ ಖರೀದಿಸಲು ಕ್ರಮ ವಹಿಸಲಾಗಿದೆಯೇ? (ವಿವರ ನೀಡುವುದು) | ಪ್ರಸ್ತುತ ಮಹಾನಗರ ಪಾಲಿಕೆ ಕಸ ಸಂಗ್ರಹ ಮತ್ತು ಸಾಗಾಟಕ್ಕೆ ವಾಹನಕೊಳ್ಳಲು ಹಣಕಾಸಿನ ತೊಡಕುಗಳು ಇರುವುದಿಲ್ಲ.<br><br>ಕಲಬುರಗಿ ಮಹಾನಗರ ಪಾಲಿಕೆಯ 2025-26ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ರೂ.4561.86 ಲಕ್ಷಗಳಾಗಿರುತ್ತದೆ.<br><br>ಸ್ವಚ್ಛಭಾರತ ಮಿಷನ್ 1.0 ಅಡಿಯಲ್ಲಿ ಮನೆ ಮನೆ ಕಸ ಸಂಗ್ರಹಣೆಗಾಗಿ 33 ಹೊಸ ವಾಹನಗಳನ್ನು ಖರೀದಿಗಾಗಿ ದಿನಾಂಕ:23.07.2025 ರಂದು GEM ಮೂಲಕ GEM/2025/B/6486269 ರಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ:22.08.2025 ಆಗಿರುತ್ತದೆ.<br><br>ಮುಂದುವರೆದು, 25 ಹೊಸ ಟ್ರಾಕ್ಟರ್ ಖರೀದಿಸಲು ಪಾಲಿಕೆ ವತಿಯಿಂದ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ಪಾಲಿಕೆಯ ಆಯವ್ಯಯದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಮೀಸಲಿರಿಸಿದ ಅನುದಾನದಲ್ಲಿ ಬಹುತೇಕ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಾಣಿಕ ಮತ್ತು ಸಂಸ್ಕರಣೆಗೆ ತಗಲುವ ಮಾನವ ಸಂಪನ್ಮೂಲ, ವಾಹನಗಳ ಇಂದನ, ಸುರಕ್ಷತಾ ಪರಿಕರ, ಧಿರಿಸು, ರಾಸಾಯನಿಕಗಳನ್ನು ಖರೀದಿಸಲು ವೆಚ್ಚ ಮಾಡಲಾಗುತ್ತಿದೆ. |

**ನಅಇ 47 ಎಸಿಜಿ 2025(ಇ)**

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.